SRI MALLIKARJUN KHARGE.— The Deputy Director is now interviewing the candidates and by the end of the last week of December the interviews will be over and appointment orders will be issued.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಬೆಳಗಾಂನಲ್ಲಿ ಈ ಅಧ್ಯಾಪಕರ ಕೊರತೆ ಹೇಗಿದೆಯೋ ಅದೇ ರೀತಿಯಾಗಿ ಎಲ್ಲಾ ಕಡೆಗಳಲ್ಲೂ ಅಧ್ಯಾಪಕರ ಕೊರತೆ ಇದೆ. ನಮ್ಮ ಜಿಲ್ಲೆಯಲ್ಲೂ ಕೂಡ ಹಾಗೆಯೇ ಇದೆ. ಕಳೆದ ವರ್ಷ ಇಂಟರ್‌ವ್ಯೂ ಮಾಡಿದರಂ. ಆದರೂ ಕೂಡ ಈವೊತ್ತಿನವರೆಗೂ ಸಹ ಅಲ್ಲಿಗೆ ಯಾವ ಪ್ರಾಥಮಿಕ ಶಾಲೆಗೇ ಆಗಲಿ ಅಧ್ಯಾಪಕರನ್ನು ನೇಮಿಸಿಲ್ಲ. ಈವೊತ್ತು ಮಾಡುತ್ತೇವೆ. ನಾಳೆ ಮಾಡುತ್ತೇವೆ ಎಂದು ಹೇಳುತ್ತಾರೆ. ಆದುದರಿಂದ ನಾನು ಕೇಳುವುದು ಈ ತತ್‌ಕ್ಷಣ ೨೪ ಗಂಟೆಯೊಳಗೆ ಅಧ್ಯಾಪಕರುಗಳನ್ನು ನೇಮಿಸುವುದಕ್ಕೆ ಆಜ್ಞೆ ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ನಾನು ನಿನ್ನೆತಾನೇ ಹೇಳಿದೆ. ಈಗಾಗಲೇ ಒಂದು ಸಾವಿರ ಪೋಸ್ಟ ಅನ್ನು ಕ್ರಿಯೇಟ್ ಮಾಡುತ್ತಿದ್ದೇವೆ,ಹೀಎಂದು ಆ ಪೋಸ್ಟ್ ಅನ್ನು ಕ್ರಿಯೇಟ್ ಮಾಡಿದ ಕೂಡಲೆ ಎಲ್ಲಿ ಶಿಕ್ಷಕರ ಕೊರತೆ ಇದೆ ಅಂಥ ಕಡೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಂದು ಸಾವಿರ ಪೋಸ್ಟ್‌ನ ಅನ್ನು ಮಂಜೂರು ಮಾಡಿ ೨ ವರ್ಷ ವಾಯಿತು, ಆದರೂ ಇದುವರೆಗೂ ಯಾರನ್ನೂ ನೇಮಕ ಮಾಡಿಲ್ಲ. ಆದುದರಿಂದ ತತ್‌ಕ್ಷಣವಾದರೂ ಕೂಡ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡುವುದು ಅಗತ್ಯವಲ್ಲವೇ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಹೇಳಿದ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

SRI B. B. SAYANAK.— Is it not the policy of the Government to fill up all the posts in the beginning of the year?

SRI MALLIKARJUN KHARGE.— That is why the Government is seriously considering and we will take definite steps to fill up the teachers posts as early as possible.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.— ಸ್ವಾಮಿ, ಎಲ್ಲಾ ಕಡೆಯೂ ಉಪಾಧ್ಯಾಯರುಗಳ ಕೊರತೆ ಇರುವುದರಿಂದ ಎಷ್ಟು ದಿವಸದಲ್ಲಿ ನೇಮಕ ಮಾಡುತ್ತೀರಿ ಅನ್ನುವುದನ್ನು ಹೇಳುತ್ತೀರಾ? ಪರೀಕ್ಷೆಗಳು ಹತ್ತಿರ ಬರುತ್ತಾ ಇರುವುದರಿಂದ ಆದಷ್ಟು ಜಾಗ್ರತೆ ನೇಮಕ ಮಾಡುತ್ತೇವೆ ಅನ್ನುವ ಆಶ್ವಾಸನೆ ಕೊಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.— ಈಗಾಗಲೇ ಆ ಪ್ರಶ್ನೆಗೆ ಆದಷ್ಟು ಜಾಗ್ರತೆ ಆ ಬಗ್ಗೆ ಸರ್ಕಾರ ಕೆಲಸ ಮಾಡುತ್ತಾ ಇದೆ ಎಂದು ಉತ್ತರ ಹೇಳಿದ್ದೇನೆ.

SRI P. A. PAWASHE.— The Hon'ble Minister has stated that 9232 applications have been received. May I know how many posts have been sanctioned for the Belgaum Taluka?

SRI MALLIKARJUN KHARGE.—If the Hon'ble Member puts a specific question, I will answer. For 28 posts, we have received nearly 9232 applications.

Enquiry into Chikkahole Dam burst

119. SRI K. SIDDAIAH (Santhemarahally):— Will the Minister of State for Major and Medium Irrigation be pleased to state:—

(*a*) the date on which the Enquiry Committee to enquire into the Chikkahole Dam burst was constituted;

(*b*) the names of members of the Enquiry Committee;

(*c*) whether the Committee has submitted its report to Government;

(*d*) if so, when?

SRI SUBHAS ASTHURE (Minister of State for Major and Medium Irrigation) —

(*a*) On 1-1-1973.

(*b*) Shri P. M. Mane, retired Member of the Central Water and Power Commission, New Delhi. It was a Single-man Commission.

(*c*) Yes.

(*d*) August 1973.

ಶ್ರೀ ಕೆ. ಸಿದ್ದಯ್ಯ.— ಸ್ವಾಮಿ, ಚಿಕ್ಕಹೊಳೆ ಅಣೆಕಟ್ಟು ಒಡೆದು ಹೋಗಿರುವುದಕ್ಕೆ ಎನು ಒಂದು ಸಮಿತಿ ನೇಮಿಸಿ ಅವರು ಏನು ವರದಿ ಸಲ್ಲಿಸಿದ್ದಾರೆ ಆ ವರದಿಯಲ್ಲಿ ಇದು ಒಡೆದು ಹೋಗುವುದಕ್ಕೆ ಕಾರಣ ಡಿಫೆಕ್ಟೀವ್ ಕನ್‌ಸ್ಟ್ರಕ್ಷನ್ ಅಂತ ಕಾರಣ ಕೊಟ್ಟಿದ್ದಾರೆಯೇ ಅಥವಾ ಸ್ಟ್ಯಾಫ್ ನೆಗ್ಲಿಜೆನ್ಸ್ ಅಂತ ಏನಾದರೂ ಕಾರಣ ಅವರ ವರದಿಯಲ್ಲಿ ಕೊಟ್ಟಿದ್ದಾರೆಯೇ?

† ಶ್ರೀ ಸಂಭಾಷ್ ಅಸ್ತೂರೆ.—ಆ ಅಣೆಕಟ್ಟು ಒಡೆಯುವುದಕ್ಕೆ ಕಾರಣ ಸ್ಟ್ಯಾಫ್ ನೆಗ್ಲಿಜೆನ್ಸ್ ಎಂದು ಹೇಳಲಿಕ್ಕೆ ಆಗುವುದಿಲ್ಲ. ಆ ಬಗ್ಗೆ ನಿರ್ದಿಷ್ಟವಾಗಿ ಎನ್‌ಕ್ವೈರಿ ರಿಪೋರ್ಟ್ ಆಗಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಆ ಅಣೆಕಟ್ಟಿಗೆ ನೀರಿನ ಒಂದು ಮಿತಿ ಏನು ಇತ್ತೋ ಅದಕ್ಕಿಂತಲೂ ಹೆಚ್ಚು ಓವರ್‌ಫ್ಲೋ ಆಗಿ ಬಂದಿದ್ದರಿಂದ ಆ ಅಣೆಕಟ್ಟು ಬ್ರೀಚ್ ಆಗಿದೆ ಎಂದು ಹೇಳಿದೆ.

ಶ್ರೀ ಕೆ. ಸಿದ್ದಯ್ಯ.—ಈ ಅಣೆಕಟ್ಟು ಒಡೆದು ಹೋಗಬೇಕಾದರೆ ಡಿಫೆಕ್ಟೀವ್ ಕನ್‌ಸ್ಟ್ರಕ್ಷನ್ ಇರಬೇಕು ಇಲ್ಲವೇ ಸ್ಟಾಫ್ ಸರಿಯಾಗಿ ಸೂಪರ್‌ವೈಜ್ ಮಾಡದ ಕಾರಣ ನೀರು ಓವರ್‌ಫ್ಲೋ ಆಗಿ ಅಣೆಕಟ್ಟು ಒಡೆದಿರಬೇಕು; ಆದಕಾರಣ ಅವರ ವರದಿಯಲ್ಲಿ ನಿರ್ದಿಷ್ಟವಾಗಿ ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನು ತಾವು ತಿಳಿಸಬೇಕು?

SRI SUBHAS ASTHURE.— Government appointed a committee of experts to examine the reason for this breach. The committee in their wisdom have not fixed responsibility directly on any officer. Indirectly, they have stated that the Engineer, the Executive Engineer, and some of the Junior Superintending Engineers are responsible. So, it cannot be said who are responsible for this.

ಶ್ರೀ ಕೆ. ಸಿದ್ದಯ್ಯ.— ಇದರಲ್ಲಿ ಇನ್-ಡೈರಕ್ಟ್ ಆಗಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲೀ, ಅಸಿಸ್ಟೆಂಟ್ ಇಂಜಿನಿಯರ್ ಆಗಲೀ, ಅಥವಾ ಯಾರೇ ಆಗಿರಲಿ, by designation they have stated It is not difficult to fix up the responsibility on this Executive Engineer or Assistant Engineer or whoever they may be.

SRI SUBHAS ASTHURE.— What the hon'ble member is suggesting is quite correct but the enquiry committee has not fixed responsibility directly on any body and they have fixed indirect responsibility. They have given an explanation and Government have accepted the explanation.